# ಯುವ ಜನರ ಮಾರ್ಗದರ್ಶನಕ್ಕೆ 'ಕೌನ್ಸಲರ್'

**ಸ್ಪರ್ಧಾತ್ಮಕವಾದ ಜಗತ್ತಿನಲ್ಲಿ ಶೈಕ್ಷಣಿಕ, ಔದ್ಯೋಗಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ, 'ತಂದೆ-ತಾಯಿಯರ ಮಾತನ್ನು ಕೇಳದ' ಮಕ್ಕಳು ಅಥವಾ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳಲು ಅಸಮರ್ಥರಾಗಿರುವ ಯುವಕ-ಯುವತಿಯರಿಗೆ ಮಾಹಿತಿ-ಮಾರ್ಗದರ್ಶನದ ಮಹಾಪೂರವನ್ನೇ ಹರಿಸುತ್ತದೆ 'ಕೌನ್ಸಲಿಂಗ್' ಅಥವಾ 'ಆಪ್ತ ಸಲಹೆ'.**




ಮನುಷ್ಯ ಸಮಾಜ ಜೀವಿ. ಅವನು ತನ್ನ ಕಷ್ಟ-ಸುಖಗಳನ್ನು ಆತ್ಮೀಯರ ಬಳಿ ಹಂಚಿಕೊಳ್ಳುತ್ತಾನೆ. ಅಷ್ಟೇ ಅಲ್ಲ ತನ್ನ ಹಿತೈಷಿಗಳು ಕೊಡುವ ಸಲಹೆ-ಮಾರ್ಗದರ್ಶನಗಳನ್ನು ಅಳವಡಿಸಿಕೊಳ್ಳುತ್ತಾನೆ. ಹೀಗೆ, ಪಡೆಯುವ ಇತರರ ಸಲಹೆಗಳು ನಮ್ಮ ಜೀವನದಲ್ಲಿ 'ಹೊಸ ತಿರುವನ್ನೇ' ತಂದು ಕೊಡಬಹುದು. ಈ ಕಂಪ್ಯೂಟರ್ ಯುಗದಲ್ಲಿ ಈ ಸಲಹೆಗಳದೇ ಕಾರುಬಾರು. ಅದರ ಹೆಸರು 'ಕೌನ್ಸಲಿಂಗ್'. ಅದು ಈಗ, ಮಹಿಳೆಯರ ಪ್ರಾಬಲ್ಯದ ಕ್ಷೇತ್ರ.

ಈ 'ಕೌನ್ಸಲಿಂಗ್' ಇಲ್ಲದಿದ್ದರೆ, ಅನೇಕ ಮದುವೆಗಳು ನಡೆಯುತ್ತಿರಲಿಲ್ಲವೇನೋ. ನಡೆದ ಮದುವೆಗಳು ಮುರಿದು, ವಿಚ್ಛೇದಿತವಾಗುತ್ತಿದ್ದವೇನೋ? ಇಚ್ಛಿಸಿದ ಕಾಲೇಜು-ಕೋರ್ಸುಗಳು, ಉದ್ಯೋಗಗಳು, ದೊರೆಯುತ್ತಿರಲಿಲ್ಲವೇನೋ? ಹೀಗೆ ಬಯಸಿದ ವಸ್ತುಗಳು, ವ್ಯಕ್ತಿಗಳು ನಮಗೆ ದೊರೆಯಲು ನೆರವಾಗುವ ಮಾರ್ಗದರ್ಶನವೇ 'ಕೌನ್ಸಲಿಂಗ್', ಅವುಗಳನ್ನು ದೊರಕಿಸಿಕೊಡುವವರು 'ಕೌನ್ಸಲರ್'. ಸ್ಪರ್ಧಾತ್ಮಕವಾದ ಜಗತ್ತಿನಲ್ಲಿ ಶೈಕ್ಷಣಿಕ, ಔದ್ಯೋಗಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ, 'ತಂದೆ-ತಾಯಿಯರ ಮಾತನ್ನು ಕೇಳದ' ಮಕ್ಕಳು ಅಥವಾ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳಲು ಅಸಮರ್ಥರಾಗಿರುವ ಯುವಕ-ಯುವತಿಯರಿಗೆ ಮಾಹಿತಿ-ಮಾರ್ಗದರ್ಶನದ ಮಹಾಪೂರವನ್ನೇ ಹರಿಸುತ್ತದೆ 'ಕೌನ್ಸಲಿಂಗ್' ಅಥವಾ 'ಆಪ್ತ ಸಲಹೆ'. ಇದೊಂದು ಸಮಾಜ ಸೇವೆಯೂ ಹೌದು.

ಭಾರತದಲ್ಲೀಗ ಮಹಿಳಾ ಕೌನ್ಸಲರ್‌ಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಬೆಂಗಳೂರಿನ ಜನಪ್ರಿಯ ಮಹಿಳಾ ಕೌನ್ಸಲರ್‌ಗಳ ಪರಿಚಯ ಮತ್ತು ಅವರ ಅನುಭವಗಳ ಮಾತು ಇಲ್ಲಿವೆ:



**ಅನ್ನಪೂರ್ಣಾ ಮೂರ್ತಿ:** ನಗರದ ಪ್ರತಿಷ್ಠಿತ 'ಉದ್ಯೋಗ ಮಾರ್ಗದರ್ಶನ ಕೇಂದ್ರ'ವೊಂದರ ನಿರ್ದೇಶಕಿ. ಅವರ ಪ್ರಕಾರ, ''ಹಿಂದಿನ ಕಾಲದಂತೆ, ಯಾವುದೋ ಒಂದು ಕೆಲಸ ಸೇರುವುದು ಸರಿಯಲ್ಲ. ಯುವ ಜನತೆಯ ಶಕ್ತಿ-ಸಾಮರ್ಥ್ಯಕ್ಕೆ ಸರಿಯಾದ ಕೆಲಸಗಳನ್ನು ಆಯ್ಕೆ ಮಾಡಿಕೊಳ್ಳುವುದರಿಂದ, ಅವರಿಂದ ಸಂಸ್ಥೆಗಳು ಹೆಚ್ಚಿನ ಸಾಧನೆಯನ್ನು ನಿರೀಕ್ಷಿಸಬಹುದು. ಅದಕ್ಕಾಗಿ, ನಾವಿಲ್ಲಿ, 'ಅಭಿರುಚಿ, ವ್ಯಕ್ತಿತ್ವ ಮತ್ತು ಬುದ್ಧಿಶಕ್ತಿ'ಗಳಿಗೆ ಸಂಬಂಧಿಸಿದ ಕಿರು ಪರೀಕ್ಷೆಗಳನ್ನು ಕೊಟ್ಟು, ಅವರ ಸಾಮರ್ಥ್ಯವನ್ನು ಕಂಡುಕೊಳ್ಳುತ್ತೇವೆ.''

''ಕೆಲವು ವಿದ್ಯಾರ್ಥಿಗಳು ಬಹಳ ಬುದ್ಧಿವಂತರಾಗಿದ್ದು, ಅವರಿಗೆ ಯಾವ ಕೋರ್ಸ್ ಮತ್ತು ಉದ್ಯೋಗಕ್ಕೆ ತಾವು ಸರಿ ಹೊಂದುತ್ತೇವೆಂಬ ನಿರ್ಧಾರ ತೆಗೆದುಕೊಳ್ಳಲಾರದೆ ಒದ್ದಾಡುತ್ತಿರುತ್ತಾರೆ. ಅಂತಹವರು ಅನೇಕ ರೀತಿಯ ಮಾನಸಿಕ ಒತ್ತಡಗಳಿಂದ ಬಳಲುತ್ತಿರುತ್ತಾರೆ. ಅಂಥ ಸಮಯದಲ್ಲಿ ನಾವು ಅವರ ಆಸಕ್ತಿಗಳನ್ನು ಗಮನಿಸಿಕೊಂಡು, ಸೂಕ್ತ ಸಲಹೆಗಳನ್ನು ನೀಡುತ್ತೇವೆ. ಅನೇಕ ವಿದ್ಯಾರ್ಥಿಗಳು, ಅವರ ಮುಂದಿನ ಭವಿಷ್ಯದ 'ಜವಾಬ್ದಾರಿ'ಯನ್ನು ನಮ್ಮ ಮೇಲೆ ಹಾಕುತ್ತಾರೆ. ನಂತರ, ಅದಕ್ಕೆ ಉತ್ತಮ ತಳಹದಿ ದೊರೆಯಿತೆಂದು ತೃಪ್ತಿ ವ್ಯಕ್ತಪಡಿಸುತ್ತಾರೆ'' ಎನ್ನುತ್ತಾರೆ.

ಇವು ಶಿಕ್ಷಣ ಮತ್ತು ಉದ್ಯೋಗ ಕುರಿತ ಮಾರ್ಗದರ್ಶನವಾದರೆ, ಅನೇಕರು ವಿವಾಹ ಮತ್ತು ಲೈಂಗಿಕತೆ ಕುರಿತು ತಪ್ಪು ಅಭಿಪ್ರಾಯಗಳನ್ನು ಇಟ್ಟುಕೊಂಡು, ಹೊರಳಾಡುತ್ತಿರುವವರಿಗೆ ಆಶಾ ದೀಪವಾಗುವುದು 'ವೈದ್ಯಕೀಯ ಮಾರ್ಗದರ್ಶನ'. ಈ ಕ್ಷೇತ್ರದಲ್ಲಿ, ಸಾವಿರಾರು ಯುವಕ-ಯುವತಿಯರಿಗೆ ಆಪ್ತ ಸಲಹೆ ನೀಡಿ, ಅವರ ವೈವಾಹಿಕ ಜೀವನವನ್ನು ಮಧುರವಾಗಿಸಿದ್ದಾರೆ **ಡಾ ಪದ್ಮಿನಿ ಪ್ರಸಾದ್**.



''ಬಹಳಷ್ಟು ಜನ ಲೈಂಗಿಕತೆ ಮತ್ತು ಸಂತಾನಕ್ಕೆ ಕುರಿತಾದ ಸಮಸ್ಯೆಗಳನ್ನು ಬೇರೆಯವರ ಬಳಿ ಹೇಳಿಕೊಳ್ಳಲಾರದೆ, ಡೋಂಗಿ ವೈದ್ಯರ ಮೊರೆ ಹೋಗಿ, ಸಮಸ್ಯೆಗಳನ್ನು ಜಟಿಲಗೊಳಿಸಿಕೊಳ್ಳುತ್ತಾರೆ. ಯುವಕ-ಯುವತಿಯರಂತೂ, ಅನೈತಿಕ ಲೈಂಗಿಕತೆಯಲ್ಲಿ ತೊಡಗಿ, ಚಿಂತಾಜನಕ ಸ್ಥಿತಿಯಲ್ಲಿ ನನ್ನ ಬಳಿ ಬರುತ್ತಾರೆ. ಅಂತಹವರು 'ಸಾಮಾಜಿಕ ಪಾಪ ಪ್ರಜ್ಞೆಯಿಂದ' ಹೊರ ಬರಲು ನಾನು ನೆರವಾಗುತ್ತಿದ್ದೇನೆ. ಮದುವೆಗೆ ಮುನ್ನವೇ, ತಾಯಿಯಾಗಲಿರುವ ಅನೇಕ ಹುಡುಗಿಯರು ಸಾಯುವುದು ತಪ್ಪಿ, ಅವರಲ್ಲಿ ಆತ್ಮ ವಿಶ್ವಾಸ ಮೂಡಿದಾಗ, ನನಗೆ ನಿಜಕ್ಕೂ ಸಂತೋಷವಾಗಿದೆ. ನಗರದ ಇಂದಿನ ಯುವಕರಿಗೆ ಒತ್ತಡಗಳು ಹೆಚ್ಚು. ಅವುಗಳ ಮಧ್ಯೆ ದೇಹ ಮತ್ತು ಮನಸ್ಸನ್ನು ಸಮತೋಲನದಲ್ಲಿ ಇಟ್ಟುಕೊಳ್ಳುವುದು ಬಹಳ ಕಷ್ಟದ ಕೆಲಸ. ಹೀಗಾಗಿ, ಅವರು ದಾರಿ ತಪ್ಪುತ್ತಿದ್ದಾರೆ.''

''ಇಂದಿನ ಯುವಕರು ಅಡ್ಡ ದಾರಿ ಹಿಡಿಯುವುದರಲ್ಲಿ ಅವರ ತಂದೆ-ತಾಯಿಯರ ಪಾತ್ರವೂ ಇದೆ. 'ತಲೆಮಾರಿನ ಅಂತರ'ದಿಂದಾಗಿ, ಮಕ್ಕಳ ಮನೋಭಾವ ಮತ್ತು ಅಭಿಪ್ರಾಯಗಳು ಏನೆಂದು ಅವರು ತಿಳಿಯುವ ಗೋಜಿಗೆ ಹೋಗದೆ, ತಮ್ಮ ನಿರ್ಧಾರಗಳನ್ನು ಅವರ ಮೇಲೆ ಹೊರಿಸುವ ಪ್ರಯತ್ನ ಮಾಡುತ್ತಾರೆ. ಬದಲಿಗೆ, 'ಮಕ್ಕಳನ್ನು ಇರುವಂತೆಯೇ ಸ್ವೀಕರಿಸಿ'ದರೆ, ಮಕ್ಕಳಲ್ಲಿ ಕೀಳರಿಮೆ ಹುಟ್ಟುವುದಿಲ್ಲ. ಹಠ ಬೆಳೆಯುವುದಿಲ್ಲ. ಮಕ್ಕಳ ಏಳಿಗೆಗೆ ಕೇವಲ 'ಬೌದ್ಧಿಕ' ಅಥವಾ 'ಔದ್ಯೋಗಿಕ' ಜಾಗೃತಿ ಮಾತ್ರ ಕಾರಣವಲ್ಲ. ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯ ಅವರ ಯಶಸ್ಸಿಗೆ ಮೂಲ'' ಎಂದು ವಿಶ್ಲೇಷಿಸುತ್ತಾರೆ. ಹೀಗೆ, ಯುವಕ-ಯುವತಿಯರ ಯಾವುದೇ ರೀತಿಯ ಅಂಜಿಕೆ-ಅನುಮಾನಗಳನ್ನು ನಿವಾರಿಸಿ, ಅವರ ಭವಿಷ್ಯ ಉತ್ತಮವಾಗುವುದರಲ್ಲಿ ಸಹಾಯ ಹಸ್ತ ಚಾಚುವವರು ಈ ಕೌನ್ಸಲರ್‌ಗಳು. ಬಹುಶಃ ಇವರುಗಳ ನೆರವಿಲ್ಲದಿದ್ದರೆ, ನಗರಗಳಲ್ಲಿ ಕೊಲೆ, ಆತ್ಮಹತ್ಯೆಯಂಥ ಅಪರಾಧಗಳು ಇನ್ನಷ್ಟು ಹೆಚ್ಚುತ್ತಿದ್ದವೇನೋ? ಅವುಗಳನ್ನು ತಪ್ಪಿಸುವಲ್ಲಿ ಕೌನ್ಸಲರ್‌ಗಳು ಶ್ರಮಿಸುತ್ತಿದ್ದಾರೆ.



(ಮುಂದುವರಿಯಲಿದೆ)

■ ಉಷಾ ರಮೇಶ್